**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-105/2023**

ಪಿ.ಡಬ್ಲ್ಯೂಃ- 4

ಸಿ.ಡಬ್ಲ್ಯೂಃ- 4

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಮಿಲನ್ ಕುಮಾರ್ |
| ತಂದೆಯ ಹೆಸರುಃ | : | ಉಮಾಮಹೇಶ್ |
| ವಯಸ್ಸುಃ | : | 34 ವರ್ಷ |
| ವೃತ್ತಿಃ | : | ಇಂಜಿನಿಯರ್ |
| ವಾಸಃ | : | ಮಾರುತಿ ನಗರ, ಅರಸೀಕೆರೆ ಟೌನ್. |

**ದಿನಾಂಕಃ 11-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಗಳ ಪೈಕಿ 1ನೇ ಆರೋಪಿ ಜಯಪ್ರಸಾದ್ ನನಗೆ ಗೊತ್ತು. ಚಾಸಾ-1 ಉಷಾರಾಣಿ ನನಗೆ ಗೊತ್ತು. 2022 ರಲ್ಲಿ ಅರಸೀಕೆರೆ ಪಟ್ಟಣದ ಮಾರುತಿ ನಗರದಲ್ಲಿರುವ ನನಗೆ ಸೇರಿದ ಕಟ್ಟಡದ 1ನೇ ಮಹಜಡಿಯಲ್ಲಿರುವ ಸಿಂಗಲ್ ಬೆಡ್ ರೂಂ ಮನೆಯನ್ನು ಉಷಾರಾಣಿ ರವರು ಬಾಡಿಗೆಗೆ ಪಡೆದಿದ್ದರು. ಸದರಿ ಮನೆಯಲ್ಲಿ ಚಾಸಾ-1 ಉಷಾರಾಣಿ, ಆಕೆಯ ಗಂಡ 1ನೇ ಆರೋಪಿ ಜಯಪ್ರಸಾದ್ ಹಾಗೂ ಇಬ್ಬರು ಮಕ್ಕಳು ವಾಸವಾಗಿದ್ದರು. ಉಷಾರಾಣಿ ಹಾಗೂ

ಜಯಪ್ರಸಾದ್ ರವರ ವೈವಾಹಿಕ ಸಂಬಂಧ ಹೇಗಿತ್ತು ಎನ್ನುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈಗ ನೋಡುತ್ತಿರುವ ನಿಪಿ–2 ಸ್ಥಳ ಮಹಜರಿನಲ್ಲಿರುವ ಸಹಿ ನನ್ನದು. ನಿಪಿ–2 ಮಹಜರಿನಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಪೊಲೀಸರು ಉಷಾರಾಣಿ ಹಾಗೂ ಆಕೆಯ ಗಂಡ ಮತ್ತು ಮಕ್ಕಳು ವಾಸವಾಗಿದ್ದ ನನ್ನ ಮನೆಗೆ ಬಂದು ನಿಪಿ–2 ಮಹಜರನ್ನು ತಯಾರಿಸಿದ ಕಾಲದಲ್ಲಿ ನಾನು ಹಾಜರಿದ್ದು ನನ್ನ ಸಹಿ ಮಾಡಿರುತ್ತೇನೆ. ನಿಪಿ–3 ರಿಂದ 5 ಫೋಟೋಗಳನ್ನು ಪೊಲೀಸರು ನಿಪಿ–2 ಮಹಜರ್ ಕಾಲದಲ್ಲಿ ತೆಗೆದಿರುತ್ತಾರೆ. ನಿಪಿ–3 ಫೋಟೋವಿನಲ್ಲಿ ಸಾಕ್ಷಿದಾರರು ಚಾಸಾ–1 ಉಷಾರಾಣಿ ರವರ ಇರುವಿಕೆಯನ್ನು ಹಾಗೂ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ಈಗ ನೋಡುತ್ತಿರುವ ನಿಪಿ–8 ಮಹಜರಿನಲ್ಲಿರುವ ಸಹಿ ನನ್ನದು. ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–8(ಬಿ) ಎಂದು ಗುರುತಿಸಲಾಯಿತು. ನಿಪಿ–8 ಮಹಜರಿಗೆ ಎಲ್ಲಿ ಸಹಿ ಮಾಡಿರುತ್ತೇನೆಂದು ನನಗೆ ತಿಳಿದಿಲ್ಲ. ನಿಪಿ–8 ಮಹಜರ್ ಕಾಲದಲ್ಲಿ ನಾನು ಉಷಾರಾಣಿ ರವರ ಮದುವೆಯ ಫೋಟೋಗಳು ಹಾಗೂ ಲಗ್ನಪತ್ರಿಕೆಯ ಪ್ರತಿಯನ್ನು ನೋಡಿರುವುದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಲ್ಲಿ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2. 1ನೇ ಆರೋಪಿ ಜಯಪ್ರಸಾದ್ ಹಾಗೂ ಚಾಸಾ–1 ಉಷಾರಾಣಿ ಇಬ್ಬರು

ಅವರ ಮನೆಯಲ್ಲಿ ಆಗಾಗ ಜಗಳ ಆಡುವ ಶಬ್ದ ಪಕ್ಕದ ಮನೆಯಾದ ನಮಗೆ ಕೇಳಿ ಬರುತ್ತಿತ್ತು ಎಂದರೆ ಸರಿಯಲ್ಲ. ಗಂಡ ಹೆಂಡತಿಯ ಜಗಳ ಎಂದು ಭಾವಿಸಿ ನಾವು ಸುಮ್ಮನಿದ್ದೆವು ಎಂದರೆ ಸರಿಯಲ್ಲ. ಉಷಾರಾಣಿಯವರು ಆಕೆಗೆ ಆರೋಪಿಗಳು ಕಿರುಕುಳ ಕೊಟ್ಟಿರುತ್ತಾರೆ ಎನ್ನುವ ಬಗ್ಗೆ ದೂರು ನೀಡಿದ ಕಾರಣ ಪೊಲೀಸರು ಉಷಾರಾಣಿ ವಾಸವಾಗಿದ್ದ ಮನೆಗೆ ಬಂದು ನಿಪಿ–2 ಸ್ಥಳ ಮಹಜರ್ ತಯಾರಿಸಿರುತ್ತಾರೆಂದರೆ ಸರಿ. ದಿಃ02.09.2022 ರಂದು ಚಾಸಾ–1 ಉಷಾರಾಣಿ ರವರು ಅರಸೀಕೆರೆ ನಗರ ಪೊಲೀಸ್ ಠಾಣೆಯಲ್ಲಿ ತನ್ನ ಹಾಗೂ 1ನೇ ಆರೋಪಿ ಜಯಪ್ರಸಾದ್ ರವರ ವಿವಾಹಕ್ಕೆ ಸಂಬಂಧಿಸಿದಂತೆ 6 ಫೋಟೋಗಳು ಹಾಗೂ ಲಗ್ನಪತ್ರಿಕೆಯ ಜೆರಾಕ್ಸ್ ಪ್ರತಿ ಹಾಜರುಪಡಿಸಿದ್ದು ಅವುಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡು ನಿಪಿ–8 ಮಹಜರ್ ತಯಾರಿಸಿದ ಕಾಲದಲ್ಲಿ ನಾನು ಪಂಚ ಸಾಕ್ಷಿಯಾಗಿ ಹಾಜರಿದ್ದು ಮಹಜರಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಉಷಾರಾಣಿ ರವರು ನನಗೆ ಸೇರಿದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ ಆಕೆ ಆರೋಪಿಗಳ ವಿರುದ್ಧ ನೀಡಿದ ದೂರಿಗೆ ಸಂಬಂಧಿಸಿದಂತೆ ಪೊಲೀಸರು ನಮ್ಮ ಮನೆಗೆ ಬಂದು ಮಹಜರ್ ಮಾಡಿದ ಸಂಬಂಧ ನಾನು ಪೊಲೀಸರಲ್ಲಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ 1ನೇ ಆರೋಪಿ ಪರ ವಕೀಲರಿಂದಃ**

3. ನಿಪಿ–2 ಸ್ಥಳ ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ ಎಂದರೆ ಸರಿ. ಪೊಲೀಸರ ಹೇಳಿಕೆ ಮೇರೆಗೆ ನಿಪಿ–2 ಮಹಜರಿಗೆ ನನ್ನ ಸಹಿ ಮಾಡಿರುತ್ತೇನೆ ಎಂದರೆ

ಸರಿ. ನಿಪಿ–2 ಮಹಜರಿಗೆ ನನ್ನ ಜೊತೆ ಸಹಿ ಮಾಡಿದ ಬೇರೆ ವ್ಯಕ್ತಿ ಯಾರು ಎಂದು ನನಗೆ ತಿಳಿದಿಲ್ಲ.

**ಪಾಟೀ ಸವಾಲುಃ 2 ರಿಂದ 5ನೇ ಆರೋಪಿಗಳ ಪರ ವಕೀಲರಿಂದಃ**

ಆರೋಪಿ–2 ರಿಂದ 5 ರವರ ಪರ ವಕೀಲರು ಗೈರು ಹಾಜರಿ. ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.